takes right decisions. ನಿಮ್ಮ ಸ್ಟೇಟ್‌ನ ಎಕ್ಸ್ ಎನರ್ಜಿ ಮಿನಿಸ್ಟರ್ ವಿರುದ್ಧ ಸಿಬಿಐ ಸ್ಟ್ರಾಂಗ್ ಎವಿಡೆನ್ಸಸ್ ಕಲೆಕ್ಟ್ ಮಾಡಿದೆಯಂತೆ. ಮೊನ್ನೆ ಅಣ್ಣ ಸತ್ಯನಾರಾಯಣಡು ದೇವರ ದರ್ಶನಕ್ಕಾಗಿ ಅನ್ನಾವರಂಗೆ ಹೋಗಿದ್ದಾಗ ಹಂದಿಯೊಂದು ಅಡ್ಡ ಬಂದು ಕಾರು ಸ್ವಲ್ಪ ಜಖಂ ಆಗಿದೆಯಲ್ಲದೆ, ಹಂದಿಯೂ ಸತ್ತುಹೋಗಿದೆ. ನಮ್ಮ ವಾಹನಗಳಿಗೆ ಯಾವೊತ್ತೂ ಹಂದಿ ತಾಕಿದ್ದೇ ಇಲ್ಲ. ವರಾಹಸ್ವಾಮಿ ನಮಗೆ ಎರಡನೇ ಮನೆ ದೇವರು. ಇದೊಂದು ದೊಡ್ಡ ಅಪಶಕುನವೆಂದೂ, ಮುಂದೆ ದೊಡ್ಡ ಗಂಡಾಂತರವೊಂದು ಎದುರಾಗಬಹುದೆಂದು ಅಣ್ಣ ಸತ್ಯನಾರಾಯಣುಡುಗೆ ಅನ್ನಾವರಂನ ಚೀಫ್ ಪ್ರೀಸ್ಟ್ ಸುಬ್ರಹ್ಮಣ್ಯಂ ರಾಮಾಜೋಯಿಸಲು ಹೇಳಿದರಂತೆ. ಏನೂ ತೊಂದರೆಯಾಗದಿದ್ದರೆ ದೇವಸ್ಥಾನಕ್ಕೆ ತಲಾ ಒಂದೊಂದು ಕೇಜಿಯ ಒಂಬತ್ತು ಚಿನ್ನದ ನಂದಾದೀಪಗಳನ್ನು ಕೊಡುವುದಾಗಿ ಅಣ್ಣ ದೇವರ ಮುಂದೆಯೇ ಹರಕೆ ಹೊತ್ತುಕೊಂಡನಂತೆ. ಆದರೂ ಫೋನು ಮಾಡಿ ಮಾತನಾಡಿದಾಗ ಮಾತಿನ ತುಂಬಾ ಭಯ, ಅಸಮಾಧಾನವೇ ತುಂಬಿಕೊಂಡಿತ್ತು. ಅವರ ಮಾತು ನನ್ನೆದೆಗೂ ಇಳಿದು ನನಗೂ ಹೃದಯ ಪುಕಪುಕ ಅನ್ನಲಿಕ್ಕೆ ಶುರುವಾಗಿದೆ. ಸರಿ, ಎಲ್ಲಾ ಮುಗಿಸಿಕೊ, ಬೆಂಗಳೂರಿನಲ್ಲಿ ಸಿಗ್ತೀನಿ. ನಮ್ಮದೇನಿದೆ, ಎಲ್ಲಾ ನಡೆಯೋದು ಮೇಲಿನವನ ತೀರ್ಮಾನದಂತೆ ಅಲ್ಲವೆ?' ಎಂದು ಫೋನ್ ಇಟ್ಟಿದ್ದ.

ಅಷ್ಟರಲ್ಲಿ ಮನೋಹರ್ ಕುಂಜು ಕವರೊಂದನ್ನು ಹಿಡಿದು ಕೆ.ಎಮ್. ನಯ್ಯಾರ್ ಬಳಿ ಬಂದಿದ್ದ. ಅದನ್ನು ಇಸಿದುಕೊಂಡ ನಯ್ಯಾರ್ ನನ್ನನ್ನು ಹೆಸರಿಡಿದು ಕರೆದಿದ್ದರು. ಹತ್ತಿರ ಹೋದಾಗ ಮನೋಹರ್ ಕುಂಜು ಅವರಿಗೆ ಕೊಟ್ಟಿದ್ದ ಕವರನ್ನು ನನ್ನ ಕೈಲಿಡುತ್ತಾ 'ಇದರಲ್ಲಿ ಎರಡು ಫ್ಲೈಟ್ ಟಿಕೆಟ್ ಇವೆ. ಒಂದು ಮಧ್ಯಾಹ್ನ ಎರಡೂವರೆ ಗಂಟೆಗೆ, ಇನ್ನೊಂದು ಮೂರು ಗಂಟೆಗೆ. ಎರಡೂವರೆ ಗಂಟೆ ಫ್ಲೈಟ್ ಟಿಕೆಟ್ ದೆಹಲಿಗೆ ಹೋಗುವ ವಿಮಾನದ್ದು, ಮೂರು ಗಂಟೆ ಫ್ಲೈಟ್ ಟಿಕೆಟ್ ಬೆಂಗಳೂರಿಗೆ ಹೋಗುವ ವಿಮಾನದ್ದು. ನಿಮ್ಮ ಅಣ್ಣ ವಿಕ್ರಂ ರೆಡ್ಡಿಯ ಸಾವಿನ ಸುದ್ದಿಯನ್ನು ಆಮ್ರಪಾಲಿ ಬೇಬಿಗೆ ಮೆಸೇಜ್ ಕಳಿಸಿದ್ದಳಂತೆ ಅರ್ಧ ಗಂಟೆಯ ಹಿಂದೆ. ತಂದೆ, ತಾಯಿ ಯಾರೂ ಇಲ್ಲದಿರುವಾಗ ಸಂಸ್ಕಾರದ ಜವಾಬ್ದಾರಿಯನ್ನು ಕುಟುಂಬದಲ್ಲಿ ಉಳಿದಿರುವ ಯಾರಾದರೊಬ್ಬರು ಮಾಡುವುದು ಧರ್ಮ. ಅಂಥ ಧರ್ಮ ಈಗ ನಿಮ್ಮ ಹೆಗಲ ಮೇಲಿದೆ. ಅಣ್ಣ ಸುಧೀಂದ್ರರ ಸಾವಿಗೆ ಅರ್ಧ ಕೇರಳವೇ ದುಃಖಿಸುತ್ತಿದೆ. ನೀವು ಇಲ್ಲಿಂದಲೇ ಸೀದಾ ಏರ್‌ಪೋರ್ಟ್‌ಗೆ ಹೊರಟುಬಿಡಿ' ಎಂದು ಆಜ್ಞೆ ಮಾಡುವವರಂತೆ ನುಡಿದಿದ್ದರು. ಸಿಂಧು ಮೆನನ್ ನನ್ನ ಕೈಕುಲುಕಿ, 'ಹ್ಯಾಪಿ ಜರ್ನಿ, ನಿಮ್ಮ ಇನ್ನೊಬ್ಬ ಅಣ್ಣ ಮಹಿಪಾಲ್ ರೆಡ್ಡಿಗೂ ಹುಷಾರಿಲ್ಲವಂತೆ. ಫ್ಲೈಟ್‌ನಲ್ಲಿ ಬರುವಾಗ ಜೊಮನ್ ಮುತೆನ್ ಪುರುಕಲ್ ಬಗ್ಗೆ ಹೇಳಿದ್ದೆ. ಆತನ ಬಗ್ಗೆ ಹೇಳಿದ ಎರಡೇ ಗಂಟೆಗಳಲ್ಲಿ ಆತ ನಿಮ್ಮ ಕಣ್ಣಿಗೂ ಬಿದ್ದಿರುವನೆಂದರೆ... ಭೂಮಿ ಮತ್ತು ಸಮಯ! ವ್ಹಾಟ್ ಎ ಕೋ ಇನ್ಸಿಡೆನ್ಸ್. ಇಡೀ ಯೂನಿವರ್ಸ್‌ನ ಲೆಕ್ಕಕ್ಕೆ ತೆಗೆದುಕೊಂಡರೆ ಸಮಯವನ್ನು ಅಳೆಯುವುದಾದರೂ ಹೇಗೆ?' ಎಂದಿದ್ದಳು. ಅವಳ ಕೈ ಸ್ಪರ್ಶ ಬಿಸಿಬಿಸಿಯಾಗಿ ಹಿತವಾಗಿತ್ತು. ನಾನು ಮಾಯೆಗೊಳಗಾದವನಂತೆ ಹೋಗಿ ಕಾರಿನಲ್ಲಿ ಕುಳಿತಿದ್ದೆ. ಕಾರು 'ಸ್ಕೂಲ್ ಆಫ್ ಚಾಲೆಂಜ್ ದಿ ಚಾಲೆಂಜ್' ದಾಟಿ ಐದು ನಿಮಿಷಗಳಾಗಿರಬೇಕು. ಮುಖ್ಯಮಂತ್ರಿಗಳ ಕಾರು ಎದುರಾಗಿತ್ತು. ಏರ್‌ಪೋರ್ಟ್ ಬಳಿ ಕಾರು ನಿಂತಾಗ ದೆಹಲಿಯ ಏರ್ ಟಿಕೆಟ್ಟನ್ನು ಜೇಬಿನಲ್ಲಿ ಇಟ್ಟುಕೊಂಡು ಬೆಂಗಳೂರಿನ ಏರ್ ಟಿಕೆಟ್ಟನ್ನು ಡ್ರೈವರ್ ಕೈಲಿ ಇಟ್ಟಿದ್ದೆ. ಡಿಪಾರ್ಚರ್ ಗೇಟನ್ನು ಪ್ರವೇಶಿಸಿದಾಗ ನನಗೆ ನಾನೇ ಖಾಲಿಯಾದಂತೆ ಅನುಭವವಾಗತೊಡಗಿತು.

ಇದಾಗಿ ಎರಡು ವರ್ಷಗಳಾಗಿವೆ. ನಾನು 'ಸ್ಕೂಲ್ ಆಫ್ ಚಾಲೆಂಜ್ ದಿ ಚಾಲೆಂಜ್'ನ ಚೇರ್ಮನ್ ಆಗಿದ್ದೇನೆ. ಸಿಂಧು ಮೆನನ್ ಮತ್ತು ನಾನು ಜೀವನ ಸಂಗಾತಿಗಳಾಗಿದ್ದೇವೆ. ಕಾರ್ಲ್ ಮಾರ್ಕ್ಸ್ ನಯ್ಯಾರ್ ರಾಜ್ಯದ ಮುಖ್ಯಮಂತ್ರಿಯಾಗಿದ್ದಾರೆ. ಭಗವಾನ್ ಕುಟ್ಟಿ ಶಬರಿಮಲೆ ಸೇರಿ ಒಂದು ದೊಡ್ಡ ಆಶ್ರಮ ಸ್ಥಾಪಿಸಿದ್ದಾನೆ. ಶಬರಿಮಲೆ ಸ್ವಾಮಿಯನ್ನು ಕಾಣಲು ಬರುವ ಭಕ್ತರಿಗೆ ಉಚಿತವಾಗಿ ಊಟ ವಸತಿಗಳ ಸೌಕರ್ಯವನ್ನು ಕಲ್ಪಿಸಿದ್ದಾನೆ. ಮುಖ್ಯಮಂತ್ರಿ ಕೆ.ಎಮ್. ನಯ್ಯಾರ್ ಅಗತ್ಯ ಬಿದ್ದಾಗ ಫೋನಿನ ಮೂಲಕವೇ ಭಗವಾನ್ ಕುಟ್ಟಿಯಿಂದ ಸಲಹೆಗಳನ್ನು ಪಡೆದುಕೊಳ್ಳುತ್ತಾರೆ. ಕೆಲವೊಮ್ಮೆ ಭಗವಾನ್ ಕುಟ್ಟಿಯನ್ನು ಖುದ್ದಾಗಿಯೇ ಕರೆಯಿಸಿಕೊಂಡು ಪ್ರಮುಖ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತಾರೆ. ರಾಘವರೆಡ್ಡಿ ತನ್ನ ಅಣ್ಣ ಸತ್ಯನಾರಾಯಣುಡುವನ್ನು ಪಾರುಮಾಡಲು ಮಾಜಿ ಎನರ್ಜಿ ಮಿನಿಸ್ಟರ್ ರಾಮ್ ಗೋಪಾಲ್‌ನೊಡನೆ ತಾನೇ ಹಣ ಹೂಡಿರುವುದಾಗಿ ಸಿಬಿಐ ಮುಂದೆ ಸ್ವಯಂ ಹೇಳಿಕೆ ನೀಡಿ ಪ್ರಸ್ತುತ ದೆಹಲಿಯ ತಿಹಾರ್ ಜೈಲಿನಲ್ಲಿದ್ದಾನೆ. ಡಾಕ್ಟರ್ ಆಮ್ರಪಾಲಿ ದೆಹಲಿಯ ರಾಮ್ ಮನೋಹರ್ ಲೋಹಿಯಾ ಆಸ್ಪತ್ರೆಯ ಡೈರೆಕ್ಟರ್ ಆಗಿದ್ದಾರೆ. ಜೊಮನ್ ಮುತೆನ್ ಪುರುಕಲ್ ಮೂರು ತಿಂಗಳ ಹಿಂದೆ ತೀವ್ರವಾದ **bipolar disorder**ಗೆ ಒಳಗಾಗಿ ಕೊಟ್ಟಾಯಂನ ಮಂದಿರಂ ಮೆಂಟಲ್ ಕೇರ್ ಯೂನಿಟ್ ಆಸ್ಪತ್ರೆಯಲ್ಲಿ ಟ್ರೀಟ್ಮೆಂಟ್ ಪಡೆಯುತ್ತಿದ್ದಾನೆ. ಅಲ್ಲಿ ಕಾಯಿಲೆ ವಾಸಿಯಾಗಲಾರದೆಂದು ಸ್ಪೆಷಲಿಸ್ಟ್ ಗಳು ಹೇಳಿರುವುದರಿಂದ ಮುಖ್ಯಮಂತ್ರಿಗಳ ಫಂಡ್‌ನಲ್ಲಿ ಟ್ರೀಟ್ಮೆಂಟ್‌ಗಾಗಿ ಅಮೆರಿಕಕ್ಕೆ ಕಳಿಸಲು ಐವತ್ತು ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಲಾಗಿದೆ. ಕಾರ್ತಿಕೇಯನ್ ಮಾಪಿಳ್ಳೈ ರಾಜ್ಯ ಪರಿಸರ ಪರಿಷತ್ತಿನ ಚೇರ್ಮನ್ ಆಗಿದ್ದಾನೆ. ಆತನ ಹೆಂಡತಿ ಮೆಫ್ರೀನ್ ವಿದೇಶದಿಂದ ಬಂದು ಕಾರ್ತಿಕೇಯನ್ ಮಾಪಿಳ್ಳೈಯೊಂದಿಗೆ ಕೊಚ್ಚಿಯಲ್ಲಿ ವಾರಕಾಲ ಜೊತೆಯಲ್ಲಿದ್ದು ಮತ್ತೆ ವಿದೇಶಕ್ಕೆ ಹಿಂತಿರುಗಿದ್ದಾಳೆ. ವೆಳ್ಳಿಯಪ್ಪ ಸ್ಟೇಟ್ ಫಿಶರೀಸ್ ಫೆಡರೇಷನ್ನಿನ ಪ್ರೆಸಿಡೆಂಟ್ ಆಗಿದ್ದಾನೆ. ನನ್ನ ಅಣ್ಣ ಮಹಿಪಾಲ್ ರೆಡ್ಡಿಯನ್ನು ಪರಕ್ಕಡುವಿನ ಪೆರುಮನ್ನನ್ ವೇಲನ್ ಹತ್ತಿರ ಭಗವಾನ್ ಕುಟ್ಟಿಯೇ ಕರೆದುಕೊಂಡು ಹೋಗಿ ವೈದ್ಯಕೀಯ ಮಾಡಿಸಿದ್ದರಿಂದ ಕಾಯಿಲೆ ಸಂಪೂರ್ಣ ವಾಸಿಯಾಗಿ ಆರೋಗ್ಯದಿಂದಿದ್ದಾನೆ. ಮತ್ತು ಈಗ ದೆಹಲಿಯಲ್ಲಿ ಸಿಬಿಐ ಜಾಯಿಂಟ್ ಡೈರೆಕ್ಟರ್ ಆಗಿ ಕೆಲಸ ಮಾಡುತ್ತಿದ್ದಾನೆ. ತಿಂಗಳಿಗೊಮ್ಮೆ ಒಂದು ದಿನ ಆಶ್ರಮಕ್ಕೆ ಬರುವ ಮುಖ್ಯಮಂತ್ರಿ ಕಾರ್ಲ್ ಮಾರ್ಕ್ಸ್ ನಯ್ಯಾರ್ ಇಲ್ಲಿನ ವಾಸಿಗಳೊಂದಿಗೆ ಒಂದೆರಡು ಮೂರು ಗಂಟೆಗಳ ಕಾಲ ಒಡನಾಡಿ, ನಮ್ಮೊಂದಿಗೆ ಊಟ ಮಾಡಿ ಹೋಗುತ್ತಾರೆ. ನನ್ನ ಹೆಸರಿನಲ್ಲಿ ಒಂದೇ ಒಂದು ನಯಾಪೈಸೆಯಷ್ಟು ಮೌಲ್ಯದ ಆಸ್ತಿಯೂ ಇಲ್ಲ. ನನ್ನದೆಂಬ ಹಿಡಿಯಷ್ಟು ಸಂಪತ್ತಿಲ್ಲದಿದ್ದರೂ ಪರಮಸುಖಿ ಆಗಿದ್ದೇನೆ.

ಕಾಲಾಯಾ ತಸ್ಮೈ ನಮಃ

(ಮುಗಿಯಿತು)

ಪ್ರತಿಕ್ರಿಯಿಸಿ: feedback@sudha.co.in

## ಕಳೆದ ಸಂಚಿಕೆಯಲ್ಲಿ...



ಸಿಂಧೂ ಮೆನನ್ನಳ ಗುಂಗಿನಲ್ಲಿದ್ದ ಕ್ರಾಂತಿ ರೆಡ್ಡಿಯನ್ನು ಎರಡು ಸಾವುಗಳು ಎದುರಾದವು. ಕ್ರಾಂತಿಯ ಅಣ್ಣ ವಿಕ್ರಂ ರೆಡ್ಡಿ ಹೃದಯಾಘಾತದಿಂದ ನಿಧನನಾಗಿದ್ದ. ಆತನ ಸಾವು ಕೊಲೆಯಾಗಿರಬಹುದೆಂದು ಮಾಧ್ಯಮಗಳು ಚರ್ಚಿಸುತ್ತಿದ್ದವು. ಅದೇ ವೇಳೆಗೆ ಸಿಂಧೂ ಮೆನನ್ನಳ ಅಪ್ಪ ಸುಧೀಂದ್ರ ನಯ್ಯಾರ್ ಅವರ ಸಾವಿನ ಸುದ್ದಿ ಬಂತು. ದೈಹಿಕ–ಮಾನಸಿಕ ಕೊರತೆಗಳನ್ನು ಅನುಭವಿಸುತ್ತಿದ್ದವರಿಗಾಗಿ ವಿಶೇಷ ಶಾಲೆಯನ್ನು ನಡೆಸುವ ಮೂಲಕ ಸಮಾಜಮುಖಿಯಾಗಿದ್ದ ಹಾಗೂ ಕೆ.ಎಮ್. ನಯ್ಯಾರ್ ಅವರಿಗೆ ನೈತಿಕ ಧೈರ್ಯವಾಗಿದ್ದ ಸುಧೀಂದ್ರ ಅವರು ಎಂಡೋ ಸಲ್ಫಾನ್ ಕುಡಿದು ಆತ್ಮಹತ್ಯೆ ಮಾಡಿಕೊಂಡ ಸುದ್ದಿಯನ್ನು ಅರಗಿಸಿಕೊಳ್ಳುವುದು ಸುಲಭವಾಗಿರಲಿಲ್ಲ. ಅಣ್ಣನ ಸಾವಿನ ಸುದ್ದಿಯನ್ನು ಪಕ್ಕಕ್ಕಿಟ್ಟ ಕ್ರಾಂತಿ, ಸಿಂಧೂಳೊಂದಿಗೆ ಸುಧೀಂದ್ರ ನಯ್ಯಾರರ ಅಂತ್ಯಸಂಸ್ಕಾರಕ್ಕೆ ಹೊರಟ.